# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ ಕು.ಸ.ಆ.ಕಾ/ಸಾಮಾನ್ಯ/2022–23

ಜ್ಞಾನಭಾರತಿ
ಬೆಂಗಳೂರು – 560 056.
ದಿನಾಂಕ 25.08.2022

## ಸುತ್ತೋಲೆ

ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಕೇತರ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ಆಡಳಿತ ವಿಷಯಗಳಲ್ಲಿ ಅಂದರೆ ವಿಶ್ವವಿದ್ಯಾಲಯ ಕಾಯಿದೆ, ವಿನಿಯಮಗಳು, ಪರಿನಿಯಮಗಳು, ಲೆಕ್ಕ ಪತ್ರಗಳ ನಿರ್ವಹಣೆ, ಲೆಕ್ಕ ಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ ಸಿದ್ಧಪಡಿಸುವ ಬಗ್ಗೆ, ರಿಟ್ ಅರ್ಜಿಗಳಿಗೆ ಕಂಡಿಕೆವಾರು ಉತ್ತರ ನೀಡುವ ಬಗ್ಗೆ, ಪತ್ರ ವ್ಯವಹಾರ ಹಾಗೂ ಕಡತಗಳ ಟಿಪ್ಪಣಿಯಲ್ಲಿ ಕನ್ನಡ ಭಾಷೆಯನ್ನು ಇನ್ನು ಹೆಚ್ಚಿನ ವೃತ್ತಿಪರತೆಯಿಂದ, ಕೌಶಲ್ಯ ಆಧಾರಿತವಾಗಿ ಉಪಯೋಗಿಸುವ ಬಗ್ಗೆ ಎರಡು ಹಂತದಲ್ಲಿ ತರಬೇತಿ ನೀಡಲಾಗುವುದು.

ನಿಪುಣ ಆಡಳಿತಾಧಿಕಾರಿಗಳು, ನಿವೃತ್ತ ಲೆಕ್ಕಾಧಿಕಾರಿಗಳು, ಕರ್ನಾಟಕ ಸಚಿವಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಉಪಕಾರ್ಯದರ್ಶಿ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿ ನೀಡಲಿದ್ದಾರೆ. ಸೆಪ್ಟೆಂಬರ್–2022 ರ 2ನೇ ವಾರ ಮೊದಲ ಹಂತದ ತರಬೇತಿ ಕಾರ್ಯಕ್ರಮ ನಡೆಯುವುದು. ನಿರ್ಧಿಷ್ಟ ದಿನಾಂಕವನ್ನು ಸಧ್ಯದಲ್ಲೇ ತಿಳಿಸಲಾಗುವುದು.

ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿಗಳು ತರಬೇತಿ ಕಾರ್ಯಕ್ರಮದಲ್ಲಿ ಹಾಜರಾಗಲು ಮಾನಸಿಕವಾಗಿ ಸಿದ್ಧರಾಗಲು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು

ಗೆ,
ವಿಶ್ವವಿದ್ಯಾಲಯದ ಎಲ್ಲಾ ಶಿಕ್ಷಕೇತರ ಸಿಬ್ಬಂದಿ ವರ್ಗದವರಿಗೆ

ಪ್ರತಿ:
ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಮತ್ತು ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.